

## ಎಡಲ್ವೀಸ್ ಸಸ್ಯ

ಇದು ತ್ವಚೆ ವಯಸ್ಸಾದಂತೆ ಕಾಣುವುದನ್ನು ತಡೆಯುವ ಅತ್ಯಂತ ಅಮೂಲ್ಯವಾದ ಸಸ್ಯಸಂಪತ್ತು. ಸ್ವಿಝರ್ಲ್ಯಾಂಡಿನ ಆಲ್ಪೈನ್ ಪರ್ವತದ ತಪ್ಪಲಿನಲ್ಲಿ ಸಿಗುವ ಈ ಸಸ್ಯದಲ್ಲಿ ಉತ್ತಮ ಆ್ಯಂಟಿ ಆಕ್ಸಿಡೆಂಟ್‍ಗಳಿವೆ. ತ್ವಚೆಯ ಪುನರುಜ್ಜೀವನಕ್ಕೆ ಬೇಕಾದ ಸಾರಸತ್ವವನ್ನು ಈ ಸಸ್ಯ ಹೊಂದಿದೆ. ಈ ಆಯುರ್ವೇದೀಯ ಸಸ್ಯ ಹೇರಳವಾದ ಔಷಧೀಯ ಗುಣಗಳನ್ನೂ ಹೊಂದಿದೆ. ಹೊಟ್ಟೆನೋವಿಗೆ, ಶ್ವಾಸಸಂಬಂಧಿ ಸಮಸ್ಯೆಗಳಿಗೆ ಇದು ದಿವ್ಯೌಷಧ.

ಈ ಸಸ್ಯದ ಕಾಂಡದಲ್ಲಿನ ತಿರುಳನ್ನು ಶೋಧಿಸಿ ಹೊಸ ತಂತ್ರಜ್ಞಾನದ ಮೂಲಕ ಆವಿಷ್ಕರಿಸಿ ಕ್ರೀಮ್ ತಯಾರಿಸಲಾಗುತ್ತದೆ. ಇದು ತ್ವಚೆಯಲ್ಲಿನ ಗೆರೆಗಳು, ಸುಕ್ಕುಗಳನ್ನು ನಿವಾರಿಸಿ ಆರೋಗ್ಯಪೂರ್ಣವಾಗಿರುವಂತೆ ನೋಡಿಕೊಳ್ಳುತ್ತದೆ. ಸೂರ್ಯನ ಅತಿನೇರಳೆ ಕಿರಣಗಳಿಂದ ತ್ವಚೆಗೆ ಉಂಟಾಗುವ ಹಾನಿಯನ್ನು ಪರಿಣಾಮಕಾರಿಯಾಗಿ ತಡೆಯುತ್ತದೆ. ತ್ವಚೆಯ ಉರಿಯೂತವನ್ನು ಉಪಶಮನ ಮಾಡುತ್ತದೆ. ಆ್ಯಂಟಿ ಏಜಿಂಗ್ ಗುಣವನ್ನು ಸಾದರಪಡಿಸಿದ ಸಸ್ಯ ಎಡಲ್ವೀಸ್ ಎಂಬುದು ಇತ್ತೀಚೆಗೆ ಸಂಶೋಧನೆ. ಹೀಗಾಗಿ ಎಡಲ್ವೀಸ್ ಸಸ್ಯಕ್ಕೆ ಈಗ ಬಹುಬೇಡಿಕೆ ಬಂದಿದೆ.

ತ್ವಚೆಯನ್ನು ಅಂದಗೆಡಿಸಲು ಕಲುಷಿತ ವಾತಾವರಣ, ಸೂರ್ಯನ ಅತಿನೇರಳೆ ಕಿರಣಗಳು, ಬಿಸಿಲಿನ ತಾಪ, ಹೊಗೆ, ಧೂಳು, ವಾಹನ, ಕೈಗಾರಿಕೆಗಳಿಂದ ಹೊರಬರುವ ವಿಷಪೂರಿತ ಗಾಳಿ.. ಮುಂತಾದವು ಕಾರಣಗಳಾಗುತ್ತವೆ. ಇವುಗಳಿಂದ ರಕ್ಷಣೆ ಪಡೆಯದೇ ಇದ್ದರೆ ಅದು ಬಹುಬೇಗ ತ್ವಚೆಯ ಮೇಲೆ ಪರಿಣಾಮ ಬೀರುತ್ತದೆ. ಇದರಿಂದಾಗಿ ಕಡಿಮೆ ವಯಸ್ಸಾಗಿದ್ದರೂ ಹೆಚ್ಚು ಆದ ಹಾಗೆ ಕಾಣಲಾರಂಭಿಸುತ್ತದೆ. ಅಲ್ಲದೆ ಇಂದಿನ ಜೀವನಶೈಲಿಯಿಂದಲೂ ತ್ವಚೆ ಬೇಗ ಸುಕ್ಕುಗಟ್ಟುತ್ತದೆ. ಮಾನಸಿಕ ಒತ್ತಡವೂ ಇದರೊಂದಿಗೆ ಸೇರಿ ಚರ್ಮದ ಒಟ್ಟಂದದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇವೆಲ್ಲದರಿಂದ ಮುಕ್ತಿ ಪಡೆಯಲೇ ಬೇಕಾಗಿದೆ.

‘ನಾವು ತಿನ್ನುವ ಆಹಾರವೇ ನಮ್ಮ ಸೌಂದರ್ಯದ ಗುಟ್ಟು’ ಎನ್ನುತ್ತಲೇ ಮಹಿಳೆಯರಲ್ಲಿ ಸೌಂದರ್ಯಪ್ರಜ್ಞೆ ಜಾಗೃತ ವಾಗಿರಬೇಕು. ಇದಕ್ಕೆ ಕಾರ್ಬೋಹೈಡ್ರೇಟ್ಸ್, ಫ್ಯಾಟ್ ಹಾಗೂ ಪ್ರೊಟೀನ್ ಸಮಾನವಾಗಿ ಇರುವ ಆಹಾರ ಸೇವನೆ ಬಹಳ ಮುಖ್ಯ. ಇದರ ಜತೆಗೆ ಶುದ್ಧವಾದ ನೀರು ಧಾರಾಳವಾಗಿ ಕುಡಿಯುವುದು, ನಿಯಮಿತ ವ್ಯಾಯಾಮ, ನಡಿಗೆ, ಕಣ್ತುಂಬ ನಿದ್ದೆ ಮಾಡಿದರೆ ನಮ್ಮ ಸೌಂದರ್ಯವನ್ನು ಕಾಪಾಡಿ ಕೊಳ್ಳಬಹುದು’ ಎಂದು ಮಾಹಿತಿ ನೀಡುತ್ತಾರೆ ಬೆಂಗಳೂರಿನ ಕಾಸ್ಮೊಡರ್ಮ ಸ್ಕಿನ್ ಅಂಡ್ ಹೇರ್ ಕ್ಲಿನಿಕ್‍ನಲ್ಲಿ ತಜ್ಞೆಯಾಗಿರುವ ಡಾ.ಚಿತ್ರಾ ಆನಂದ್.



**ಡಾ.ಚಿತ್ರಾ ಆನಂದ್**

‘ನಾವು ತಿನ್ನುವ ಆಹಾರದಲ್ಲಿ ಪೌಷ್ಟಿಕಾಂಶ ವಿಲ್ಲದೇ ಇದ್ದರೆ ಚರ್ಮದಲ್ಲಿ ಸಣ್ಣ ವಯಸ್ಸಿಗೇ ಸುಕ್ಕು ಕಾಣಿಸಿಕೊಳ್ಳುತ್ತದೆ, ಕಣ್ಣುಗಳು ನಿಸ್ತೇಜವಾಗುತ್ತವೆ. ಚರ್ಮದಲ್ಲಿ ನೆರಿಗೆ ಕಾಣಿಸಿಕೊಂಡು ಬೇಗನೇ ವಯಸ್ಸಾದಂತೆ ಕಾಣಿಸುತ್ತದೆ. ಮುಖದಲ್ಲಿ ಸಣ್ಣ ಕಪ್ಪು ಮಚ್ಚೆಗಳು ಬೀಳಲಾರಂಭಿಸುತ್ತದೆ. ಚರ್ಮದ ಬಣ್ಣ ಕಪ್ಪು ಅಥವಾ ಕಂದು ಬಣ್ಣಕ್ಕೆ ತಿರುಗುತ್ತದೆ, 30ರ ವಯಸ್ಸಿಗೇ ನಲವತ್ತರ ಹಾಗೇ ಕಾಣಿಸುವುದು ಸಾಮಾನ್ಯ. ಹೀಗಾಗಿ ಅತ್ಯಂತ ಕಾಳಜಿ ವಹಿಸಬೇಕಾದ ಅಗತ್ಯವಿದೆ’ ಎಂದು ಸಲಹೆ ನೀಡುತ್ತಾರೆ ಡಾ. ಚಿತ್ರಾ.

### ಆ್ಯಂಟಿ ಏಜಿಂಗ್ ಕ್ರೀಮ್

ತ್ವಚೆಯ ಆರೈಕೆಗಾಗಿ ಹಾಗೂ ಕಡಿಮೆ ವಯಸ್ಸಾದಂತೆ ಕಾಣಲೆಂದೇ ಹಿಮಾಲಯ ಡ್ರಗ್ ಕಂಪೆನಿ ‘ಯುತ್ ಎಟರ್ನಿಟಿ’ ಎಂಬ ಕ್ರೀಮ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ತ್ವಚೆಗೆ ವಯಸ್ಸಾದಂತೆ ಕಾಣುವುದನ್ನು ತಡೆಯುತ್ತದೆ ಎಂಬುದು ಕಂಪೆನಿಯ ವಿವರಣೆ.

‘ಈ ಕ್ರೀಮ್ ತಯಾರಿಕೆಗೆ ಸ್ವಿಝರ್ಲ್ಯಾಂಡಿನ ಪರ್ವತ ಶ್ರೇಣಿಯ ತಪ್ಪಲಿನಲ್ಲಿರುವ ಎಡಲ್ವೀಸ್ ಎಂಬ ಸಸ್ಯದ ಕಾಂಡವನ್ನು ಬಳಸಲಾಗಿದೆ. ಇದು ಬಹಳ ಅಪರೂಪದ ಸಸ್ಯವಾಗಿದ್ದು, ವಿಶ್ವದ ಬೇರೆ ಯಾವ ಭಾಗದಲ್ಲೂ ಸುಲಭವಾಗಿ ಕಾಣಸಿಗುವುದಿಲ್ಲ. ಈ ಸಸ್ಯದ ಕಾಂಡದಲ್ಲಿ ತ್ವಚೆಯನ್ನು ಸಂಪೂರ್ಣವಾಗಿ ಕಾಪಾಡುವ ಅಂಶವಿದ್ದು, ಇದರಿಂದ ತಯಾರಿಸಿದ ಕ್ರೀಮ್ ತ್ವಚೆಯ ನಯಕ್ಕೆ, ಆರೋಗ್ಯಕ್ಕೆ ಯೋಗ್ಯವಾದದ್ದು. ಹಲವಾರು ವರ್ಷಗಳ ಸಂಶೋಧನೆಗಳ ಬಳಿಕ ಹಿಮಾಲಯ ಈ ಸಸ್ಯವನ್ನು ಬಳಸಿ ಕ್ರೀಮ್ ತಯಾರಿಸಿದೆ’ ಎಂದು ಹೇಳುತ್ತಾರೆ ಹಿಮಾಲಯ ಡ್ರಗ್ ಕಂಪೆನಿಯ ಮಾರುಕಟ್ಟೆ ನಿರ್ದೇಶಕ ರಾಜೇಶ್ ಕೃಷ್ಣಮೂರ್ತಿ.

‘ಜೀವನಶೈಲಿ ಕಾಯಿಲೆಗಳು, ಮಾನಸಿಕ ಒತ್ತಡ, ವಾತಾವರಣದ ಬದಲಾವಣೆ, ರಾಸಾಯನಿಕ ಯುಕ್ತ ಕ್ರೀಮ್‍ಗಳ ಬಳಕೆ, ಕಲಬೆರಕೆ ಆಹಾರ ಸೇವನೆ, ಫಾಸ್ಟ್‍ಫುಡ್, ಜಂಕ್ ಫುಡ್‍ಗಳ ಮಿತಿಮೀರಿದ ಸೇವನೆ, ನಿದ್ದೆ ಇಲ್ಲದಿರುವುದು... ಇವೇ ಮುಂತಾದ ಕಾರಣಗಳಿಂದ ಚರ್ಮ ಕಳಾಹೀನವಾಗುತ್ತದೆ. ತ್ವಚೆ ಎಂದಿಗೂ ನಳನಳಿಸುವಂತಿರಲು ಯೋಗ್ಯವಾದ ಆರೈಕೆ ಬಹಳ ಮುಖ್ಯ’ ಎಂದು ವಿವರಣೆ ನೀಡುತ್ತಾರೆ ಅವರು.